**05/08/23** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ನೀವು ಈಗ ಮೂರು ಹಾದಿ ಸೇರುವ ವೃತ್ತದ ಮಧ್ಯೆ ನಿಂತಿರುವಿರಿ, ಒಂದು ಕಡೆ ದುಃಖಧಾಮ, ಇನ್ನೊಂದುಕಡೆ ಶಾಂತಿಧಾಮ ಮತ್ತು ಮೂರನೇಕಡೆ ಸುಖಧಾಮ, ಈಗ ನಾನು ಯಾವ ಕಡೆ ಹೋಗಬೇಕು? ಎಂದು ನಿರ್ಧಾರ ಮಾಡಿ"

ಪ್ರಶ್ನೆ: ಯಾವ ನಿಶ್ಚಯದ ಆಧಾರದ ಮೇಲೆ ನೀವು ಮಕ್ಕಳು ಸದಾ ಹರ್ಷಿತರಾಗಿರುವಿರಿ ?

ಉತ್ತರ: ಎಲ್ಲದಕ್ಕಿಂತ ಮೊದಲು ನಾನು ಯಾರ ಮಗುವಾಗಿದ್ದೇನೆ! ಎಂಬ ನಿಶ್ಚಯವಿರಬೇಕು. ತಂದೆಗೆ ಮಗುವಾದ ಮೇಲೆ ಯಾವುದೇ ವೇದ-ಶಾಸ್ತ್ರ ಮುಂತಾದ ಪುಸ್ತಕಗಳನ್ನು ಓದುವ ಅವಶ್ಯಕತೆ ಇಲ್ಲ. ಎರಡನೇ ನಿಶ್ಚಯ ಇರಬೇಕಾಗಿದೆ ನಮ್ಮ ಕುಲ ಎಲ್ಲದಕ್ಕಿಂತ ಶ್ರೇಷ್ಠ ದೇವತಾ ಕುಲವಾಗಿದೆ - ಈ ಸ್ಮೃತಿಯಿಂದ ಇಡೀ ಚಕ್ರ ನೆನಪಿಗೆ ಬಂದುಬಿಡುವುದು. ತಂದೆ ಮತ್ತು ಚಕ್ರದ ಸ್ಮೃತಿಯಲ್ಲಿಇರುವವರು ಸದಾ ಹರ್ಷಿತವಾಗಿರುತ್ತಾರೆ.

ಗೀತೆ: ಯಾರೋ ನನ್ನನ್ನು ತನ್ನವರನ್ನಾಗಿ ಮಾಡಿಕೊಂಡರು...............

ಓಂ ಶಾಂತಿ..ನೀವು ಮಕ್ಕಳಿಗಂತೂ ಮೊಟ್ಟಮೊದಲು ಖುಷಿ ಯಾಗುತ್ತದೆ- ನಾವು ಯಾರ ಮಗುವಾಗಿದ್ದೇವೆ. ನಾವು ಗುರುಗಳಿಗೆ ಸೇರಿದವರಾಗಿದ್ದೇವೆ ಎಂದು ಹೇಳುವುದಿಲ್ಲ. ತಂದೆಯವರಾಗಬೇಕಾಗುತ್ತದೆ. ಶರೀರ ಬಿಟ್ಟರೂ ಸಹ ತಂದೆಗೆ ಸೇರಿದವರಾಗ ಬೇಕಾಗುತ್ತದೆ. ಇಲ್ಲೂ ಸಹ ತಂದೆಗೆ ಸೇರಿದವರಾಗಬೇಕಾಗುತ್ತದೆ. ವೇದ, ಶಾಸ್ತ್ರ ಮುಂತಾದುವುಗಳ ಅಗತ್ಯವಿಲ್ಲ. ಮಗ ಜನ್ಮಪಡೆದೊಡನೆ ತಂದೆ ತಿಳಿಯುತ್ತಾನೆ ನನ್ನ ಆಸ್ತಿಗೆ ವಾರಸುದಾರ ಹುಟ್ಟಿದ್ದಾನೆ ಎಂದು. ಇಲ್ಲಿ ಸಂಬಂಧದ ಮಾತಾಗಿದೆ. ನೀವು ಮಕ್ಕಳೂ ತಿಳಿದಿರುವಿರಿ ನಾವು ವಾಸ್ತವದಲ್ಲಿ ಮೊದಲೆ ಪಾರಲೌಕಿಕ ತಂದೆ ಶಿವಬಾಬಾನ ಮಕ್ಕಳಾಗಿದ್ದೇವೆ. ಮೊದಲು ನಾನು ಆತ್ಮನಾಗಿದ್ದೇನೆ, ನಂತರ ನಮಗೆ ಶರೀರ ಸಿಗುತ್ತದೆ. ನಿಮಗೆ ಶರೀರವಂತು ಇದೆ. ಈಗ ನಿಮಗೆ ಬೇಹದ್ದಿನ ತಂದೆ ಸಿಕ್ಕಿದ್ದಾರೆ. ಅವರು ಬಂದು ತನ್ನ ಪರಿಚಯ ಕೊಟ್ಟಿದ್ದಾರೆ. ನೀವು ಹೇಳುವಿರಿ ಬಾಬಾ ನಾವು ನಿಮ್ಮವರಾಗಿದ್ದೇವೆ ಮತ್ತು ಬೇರೆ ಯಾವುದೂ ಸಂಬಂಧವಿಲ್ಲ. ತಂದೆಗೆ ಮಕ್ಕಳಾಗಿರುವಿರಿ. ಇವರು (ಬ್ರಹ್ಮಾ ಬಾಬಾ) ಹೇಳುತ್ತಾರೆ ನಾನು ಯವುದೇ ಗುರು-ಗೋಸಾಯಿ ಅಲ್ಲ. ಬೋರ್ಡ್ನ ಮೇಲೂ ಸಹ ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿಯ ಹೆಸರು ಬರೆಯಲಾಗಿದೆ ಅಂದರೆ ತಂದೆ ಕೂಡ ಖಂಡಿತ ಇರಬೇಕು. ನೀವೂ ಬರೆಯುವಿರಿ ನಾವು ಬ್ರಹ್ಮಾಕುಮಾರ-ಕುಮಾರಿಯರು ಎಂದು. ಇದು ಸಂಬಂಧ ವಾಯಿತಲ್ಲವೇ. ತಾಯಿ ತಂದೆಯ ಸಂಬಂಧ ಇರಬೇಕು. ಗೀತೆಯನ್ನು ಹಾಡುವಿರಿ ನೀವೇ ತಾಯಿ-ತಂದೆ ನಾವು ನಿಮ್ಮ ಬಾಲಕರು......... ಆತ್ಮಕ್ಕೆ ಆ ಅವಿನಾಶಿ ನೆನಪಿದೆ. ಯಾವಾಗ ನಾವು ನಿಮ್ಮ ಬಾಲಕರಾಗುವೆವು ಆಗ ನಾವು ಆಸ್ತಿಯನ್ನು ಪಡೆಯುವೆವು. ಈಗ ನೀವು ತಿಳಿದಿರುವಿರಿ ನಾವು ಮಾತಾ-ಪಿತರಿಗೆ ಸೇರಿದವರಾಗಿದ್ದೇವೆ ಎಂದು. ನಾವು ಶಿವಬಾಬಾನ ಮಕ್ಕಳಾಗಿರುವೆವು ಎಂದಮೇಲೆ ಖಂಡಿತ ತಂದೆ ಮತ್ತು ಆಸ್ತಿಯ ನೆನಪು ಬರುತ್ತದೆ. ನಿಮಗೆ ಇಲ್ಲಿ ಯಾವುದೇ ಪುಸ್ತಕ ಮುಂತಾದುವುಗಳನ್ನು ಓದಿಸುವುದಿಲ್ಲ, ನಿಮಗೆ ಕೇವಲ ನಿಶ್ಚಯ ಮಾಡಿಸಲಾಗುತ್ತದೆ. ತಂದೆಗೆ ಸೇರಿದವರಾದಿರಿಯೆಂದರೆ ಈಗ ಅವರನ್ನು ನೆನಪು ಮಾಡಿ.

ತಂದೆ ತಿಳಿಸುತ್ತಾರೆ ನನ್ನನ್ನು ನೆನಪು ಮಾಡುವುದರಿಂದ ನೀವು ಹೀಗೆ (ಲಕ್ಷ್ಮಿ-ನಾರಾಯಣ) ಆಗುವಿರಿ. ಎಷ್ಟು ಸಹಜ ಮಾತಾಗಿದೆ. ವಿಶಾಲಬುದ್ಧಿ ಇರಬೇಕಾಗಿದೆ. ಮತ್ತು ಬೇರೆ ಏನನ್ನೂ ತಿಳಿಸುವುದಿಲ್ಲ ಕೇವಲ ತಮ್ಮ ಕುಲದ ಮಾತನ್ನೇ ತಿಳಿಸುತ್ತಾರೆ ಹೇಗೆ ನಾವು 84 ರ ಚಕ್ರದಲ್ಲಿ ಬರುತ್ತೇವೆ. ಬಾಕಿ ವೇದ, ಶಾಸ್ತ್ರ ಮುಂತಾದುವುಗಳನ್ನು ಓದುವುದರಿಂದಲೂ ನಿಮ್ಮನ್ನು ಬಿಡಿಸುತ್ತಾರೆ. ತಂದೆಯನ್ನೇ ನೆನಪು ಮಾಡುತ್ತಿರಬೇಕು. ಸೃಷ್ಠಿ ಚಕ್ರ ಹೇಗೆ ಸುತ್ತುತ್ತದೆ? ಎಂದೂ ಸಹ ಬುದ್ಧಿಯಲ್ಲಿದೆ. ಇದರ ಆದಿ-ಮಧ್ಯ-ಅಂತ್ಯವನ್ನು ತಿಳಿಯುವುದರಿಂದಲೇ ನೀವು ಶ್ರೇಷ್ಠಾತಿ ಶ್ರೇಷ್ಠರಾಗುವಿರಿ. ಸ್ವರ್ಗದ ಮಾಲೀಕರಾಗುವಿರಿ. ನಿಮ್ಮನ್ನು ಸದಾಕಾಲಕ್ಕಾಗಿ ಹರ್ಷಿತಮುಖರನ್ನಾಗಿ ಮಾಡುವೆನು. ಎಷ್ಟು ಸಹಜ ಮಾತಾಗಿದೆ. ಆದರೆ ಮತ್ತೆ ಮರೆತುಬಿಡುವಿರಿ. ಕಾರಣ ಏನು? ತಾಯಿ-ತಂದೆಯನ್ನು ಮಕ್ಕಳೂ ಸಹ ಮರೆಯುವುದಿಲ್ಲ. ತಂದೆ ಮತ್ತು ಆಸ್ತಿಯನ್ನು ನೆನಪು ಮಾಡುವುದರಿಂದ ಸದಾ ಹರ್ಷಿತರಾಗಿರುವಿರಿ. ಯಾವಾಗ ಏನಾದರೂ ದುಃಖವಾದಾಗ ತಂದೆಯನ್ನೇ ನೆನಪು ಮಾಡುವಿರಿ. ಏಕೆಂದರೆ ತಂದೆ ಖಂಡಿತ ಸುಖವನ್ನೇ ಕೊಟ್ಟಿದ್ದಾರೆ. ಯಾರಾದರೂ ದುಃಖ ಕೊಟ್ಟರೆ ಅಯ್ಯೋ ಬಾಬಾ, ಅಯ್ಯೋ ಭಗವಂತ ಎಂದು ಹೇಳುತ್ತಾರೆ. ಪ್ರತೀ ಜನ್ಮದಲ್ಲಿ ಅಯ್ಯೋ! ಅಯ್ಯೋ! ಎಂದು ಹೇಳುತ್ತಲೇ ಬಂದಿರಿ. ಈಗ ನೀವು ಮಕ್ಕಳಿಗೆ ಬಹಳ ಸಹಜವಾಗಿ ತಿಳಿಸುತ್ತೇನೆ. ಭಲೆ ನೀವು ಆರೋಗ್ಯವಾಗಿಲ್ಲದಿದ್ದರೂ, ಎಷ್ಟೇ ಖಾಯಿಲೆ ಇದ್ದರೂ ಸಹ ನೀವು ಸೇವೆಯನ್ನು ಮಾಡಬಹುದು. ಹೇಗೆ ಖಾಯಿಲೆಯಿರುವ ಸಮಯದಲ್ಲಿ ಮನುಷ್ಯರಿಗೆ ಹೇಳಲಾಗುತ್ತದೆ ರಾಮ-ರಾಮ ಎನ್ನಿ ಎಂದು. ನೀವೂ ಯಾರಿಗಾದರೂ ಖಾಯಿಲೆಯಿದ್ದಾಗ ಶಿವಬಾಬಾನನ್ನು ನೆನಪು ಮಾಡಿ ಎಂದು ಹೇಳಿ. ಇದು ಖಂಡಿತ ಅನ್ಯರಿಗೂ ನೆನಪು ಮಾಡಿಸುವುದಾಗಿದೆ. ಸಾಯುವಂತಹ ಸಂದರ್ಭದಲ್ಲಿಯೂ ನೀವು ಈ ಜ್ಞಾನವನ್ನು ಕೊಡಬಹುದು. ನೀವು ಪರಮಾತ್ಮನ ಮಕ್ಕಳಾಗಿರುವಿರಿ, ಅವರನ್ನು ನೆನಪು ಮಾಡಿ. ಶಿವಬಾಬಾ ಬೇಹದ್ದಿನ ತಂದೆಯಾಗಿದ್ದಾರೆ, ಅವರೇ ಆಸ್ತಿಯನ್ನು ಕೊಡುತ್ತಾರೆ. ಸೇವೆಯಲ್ಲಿ ರುಚಿಯಿರುವವರು ಸಾಯುವಂತಹ

ಸಂದರ್ಭದಲ್ಲೂ ಅನ್ಯರಿಗೆ ಜ್ಞಾನ ಕೊಡುತ್ತಾರೆ. ಆಸ್ಪತ್ರೆಯಲ್ಲಿ ಮಲಗಿರುವಾಗ ಮಾತನಾಡಬಾರದು ಎಂದಲ್ಲ. ಬಾಯಿಂದ ಏನಾದರೂ ಒಂದು ಜ್ಞಾನದ ಮಾತು ಬರುತ್ತಿರಬೇಕು. ಎಂತಹ ಒಳ್ಳೆಯ ಅವಸ್ಥೆಯಿರಬೇಕಾಗಿದೆ. ಖಾಯಿಲೆ ಇರುವಾಗಲೂ ಒಳ್ಳೆಯ ಸೇವೆ ಮಾಡಬಹುದಾಗಿದೆ. ಮಿತ್ರ ಸಂಬಂಧಿಗಳು ಬಂದಾಗ ಅವರಿಗೂ ಹೇಳಿ ಪರಮಾತ್ಮನನ್ನು ನೆನಪುಮಾಡಿ. ಅವರೇ ಸರ್ವರನ್ನೂ ರಕ್ಷಿಸುವವರು ಆದ್ದರಿಂದ ಶಿವಬಾಬಾರವರನ್ನು ನೆನಪು ಮಾಡಿ. ಅವರು ಒಬ್ಬರೇ ಆಗಿದ್ದಾರೆ. ಆಸ್ತಿಯು ಎಲ್ಲರಿಗೂ ಒಬ್ಬರಿಂದಲೇ ಸಿಗುತ್ತದೆ ಎಂದು ಹೇಳಿ. ಲೌಕಿಕ ಸಂಬಂಧದಲ್ಲಿ ಆಸ್ತಿಯು ಗಂಡು ಮಕ್ಕಳಿಗೆ ಸಿಗುತ್ತದೆ. ಕನ್ಯೆಯು 100 ಬ್ರಾಹ್ಮಣರಿಗಿಂತಲೂ ಉತ್ತಮರಾಗಿದ್ದಾರೆ. ಪವಿತ್ರ ವಸ್ತುವನ್ನೇ ದಾನ ಮಾಡಲಾಗುತ್ತದೆ. ನೀವು ಕನ್ಯೆಯರು ಎಲ್ಲರಿಗಿಂತಲೂ ಪವಿತ್ರರಾಗಿರುವಿರಿ ಆದ್ದರಿಂದ ನಾವು ಕನ್ಯೆಯನ್ನು ದಾನ ಕೊಡುತ್ತೇವೆಯೆಂದು ಹೇಳಲಾಗುತ್ತಾರೆ. ಅದು ಬಹಳ ದೊಡ್ಡ ದಾನವೆಂದು ತಿಳಿಯುತ್ತಾರೆ. ವಾಸ್ತವದಲ್ಲಿ ಅಲ್ಲಿ ಯಾವುದೇ ದಾನ ಆಗುವುದಿಲ್ಲ. ದಾನವನ್ನು ಈಗ ನೀವು ಮಾಡುವಿರಿ. ಹೇಳುವಿರಿ ನಾವು ನಮ್ಮ ಕನ್ಯೆಯನ್ನು ಶಿವಬಾಬಾರವರಿಗೆ ಕೊಡುತ್ತೇವೆ, ಸ್ವರ್ಗದ ಮಹಾರಾಣಿ ಆಗುವುದಕ್ಕೋಸ್ಕರ. ಆದರೆ ಕನ್ಯೆಕೂಡ ಚೆನ್ನಾಗಿ ಓದು ಬರಹ ತಿಳಿದವರಾಗಿರಬೇಕು, ನಮ್ಮ ದೈವೀಕುಲದವರಾಗಿದ್ದರೆ ಏನು ತಿಳಿಸಿಕೊಡುವರೋ ಅದನ್ನು ತಕ್ಷಣ ತಿಳಿಯುವಂತಿರಬೇಕು. ಸೇವೆಗೆ ಉಪಯುಕ್ತರಾಗಿರಬೇಕು. ಚಿಕ್ಕಮಕ್ಕಳನ್ನಂತೂ ಸಂಭಾಲನೆ ಮಾಡಲು ಆಗುವುದಿಲ್ಲ. ಬೇರೆ ಯಾರಿಗಾದರೂ ಶಿವಬಾಬಾ ನಿಮ್ಮ ಬೇಹದ್ದಿನ ತಂದೆಯಾಗಿದ್ದಾರೆ ಎಂದು ತಿಳಿಸಿಕೊಡುವುದು ಬಹಳ ಸಹಜವಾಗಿದೆ. ಚಿತ್ರ ಎದುರಿಗಿದೆ. ನೋಡಿ ಇಂತಹ ಸತ್ಯಯುಗದ ಆಸ್ತಿಯನ್ನು ಪಡೆಯುತ್ತಿರುವಿರಿ. ಈ ಲಕ್ಷ್ಮೀ-ನಾರಾಯಣರಿಗೆ ಆಸ್ತಿ ಎಲ್ಲಿಂದ ಸಿಕ್ಕಿತು? ಎಷ್ಟು ಸಹಜಮಾತು ಆದ್ದರಿಂದ ಬಾಬಾ ದೊಡ್ಡಚಿತ್ರಗಳನ್ನೂ ಸಹ ಮಾಡಿಸುತ್ತಿದ್ದಾರೆ. ಈಗ ಈ ನಾಟಕ ಪೂರ್ತಿಯಾಗುತ್ತಿದೆ. ನಾವು 84 ಜನ್ಮಗಳ ಪಾತ್ರವನ್ನು ಅಭಿನಯಿಸಿದೆವು, ಈಗ ವಾಪಸ್ಸು ಬಾಬಾನ ಬಳಿಹೋಗುತ್ತೇವೆ ಮತ್ತೆ ಹೊಸ ಪ್ರಪಂಚದಲ್ಲಿ ಬರುವೆವು. ನಮ್ಮ ಬಾಬಾ ಹೊಸ ಪ್ರಪಂಚದ ರಚೈತ ಆಗಿದ್ದಾರೆ, ನಮ್ಮನ್ನು ಅದರ ಮಾಲೀಕರನ್ನಾಗಿ ಮಾಡುತ್ತಾರೆ. ನಿಮಗೂ ಸಹ ಬೇಹದ್ದಿನ ತಂದೆ ಯಿಂದ ಸದಾ ಸುಖದ ಆಸ್ತಿಯನ್ನು ಹೇಗೆ ಪಡೆಯುವುದು? ಎನ್ನುವ ವಿಧಾನವನ್ನು ತಿಳಿಸುತ್ತೇವೆ. ಒಂದನ್ನಂತು ತಿಳಿಯಿರಿ ನಾನು ಆತ್ಮನಾಗಿದ್ದೇನೆ. ನಾನು ಆತ್ಮನೇ ತಿನ್ನುತ್ತೇನೆ, ನಾನು ಆತ್ಮನೇ ನಡೆಯುತ್ತೇನೆ. ಇದಕ್ಕೆ ಬಹಳ ಒಳ್ಳೆಯ ಅಭ್ಯಾಸ ಮಾಡಬೇಕಾಗಿದೆ. ದೇಹಾಭಿಮಾನವನ್ನು ಮುರಿಯಬೇಕಾಗಿದೆ. ದೇಹ-ಅಭಿಮಾನಿಗೆ ಲೌಕಿಕ ಸಂಬಂಧಗಳು ನೆನಪಿಗೆ ಬರುತ್ತದೆ. ದೇಹೀ-ಅಭಿಮಾನಿಗೆ ಪಾರಲೌಕಿಕ ತಂದೆಯೇ ನೆನಪಿನಲ್ಲಿರುತ್ತಾರೆ. ಏಳುತ್ತಾ-ಕೂರುತ್ತಾ-ನಡೆದಾಡುತ್ತಾ ನಾನು ಆತ್ಮನಾಗಿದ್ದೇನೆ ಎಂದು ಬುದ್ಧಿಯಲ್ಲಿಟ್ಟುಕೊಳ್ಳಬೇಕು. ತಂದೆಯ ಮತದಂತೆ ನಡೆಯಬೇಕು. ಶಿವಬಾಬಾ ಮತ ಕೊಡುತ್ತಿದ್ದಾರೆ-ನಿಮ್ಮನ್ನು ಆತ್ಮಯೆಂದುತಿಳಿಯಿರಿ. ಪರಿಶ್ರಮ ಪಡಬೇಕಾಗುತ್ತದೆ. ಸ್ವರ್ಗವಾಸಿಗಳಂತೂ ಆಗುವಿರಿ. ಆದರೆ ಸ್ವಲ್ಪದರಲ್ಲೇ ಸಂತೋಷ ಪಡಬೇಡಿ. ಭಲೆ ಸ್ವರ್ಗದಲ್ಲಂತೂ ಹೋಗುವಿರಿ. ಆದರೆ ಪಕ್ಕಾ ಸ್ವಂತಮಕ್ಕಳಾಗಿ. ಯಾರು ಬಾಪ್ದಾದಾರವರ ನೆನಪನ್ನೇ ಮಾಡುತ್ತಾರೆ ಅವರಿಗೆ ಸ್ವಂತಮಕ್ಕಳೆಂದು ಹೇಳಲಾಗುತ್ತದೆ. ಬೇರೆ ಯಾರೇ ನೆನಪಿಗೆ ಬಂದರೆ ಮಲಮಕ್ಕಳಾಗುತ್ತಾರೆ. ಬಹಳ ಮಂದಿಯಿದ್ದಾರೆ ಅವರಿಗೆ ಎರಡೂ ನೆನಪಿಗೆ ಬರುತ್ತಿರುತ್ತದೆ. ಇವರು ತಂದೆಯಾಗಿದ್ದಾರೆ ಅವಿನಾಶಿ ಸ್ವರ್ಗದ ಆಸ್ತಿಯನ್ನು ಕೊಡುವವರು. ಇಲ್ಲೂ ಕುಲ ಇದೆ, ಅಲ್ಲೂ ಸಹ ಕುಲವಿದೆ. ಅದರಿಂದ ದುಃಖವೇ ಸಿಗುತ್ತದೆ. ಆದರೆ ಅಲ್ಪಕಾಲ ಕ್ಷಣಭಂಗುರ ಸುಖದ ಆಸ್ತಿ ಸಿಗುತ್ತದೆ. ಈಗ ಬುದ್ಧಿಯಿಂದ ನಿರ್ಧಾರ ಮಾಡಬೇಕಾಗಿದೆ - ನಾವು ಯಾವಕಡೆ ಹೋಗುತ್ತಿದ್ದೇವೆ ಮತ್ತು ಯಾವ ಕಡೆ ಹೋಗಬೇಕು? ಲೌಕಿಕದ ಕಡೆಯೋ ಅಥವಾ ಪಾರಲೌಕಿಕದ ಕಡೆಯೋ? ಬುದ್ಧಿ ಹೇಳುತ್ತದೆ ಪಾರಲೌಕಿಕ ತಂದೆಗೆ ಸೇರಿದವರಾಗಿ ನಾವು ಏಕೆ ಸ್ವರ್ಗದ ಕಡೆ ಹೋಗಬಾರದು? ಲೌಕಿಕ ಸಂಬಂಧದಿಂದ ಬದುಕ್ಕಿದ್ದು ಸಾಯಬೇಕಾಗಿದೆ. ಪಾರಲೌಕಿಕ ತಂದೆಯವರಾದಿರಿ ಎಂದರೆ ಸ್ವರ್ಗದ ಮಾಲೀಕರಾಗುವಿರಿ. ಇಲ್ಲಂತು ನರಕದ ಮಾಲೀಕರಾಗುವಿರಿ. ಈಗ ಆತ್ಮ ಕೇಳುತ್ತೆ ಬುದ್ಧಿಯನ್ನು ಎಲ್ಲಿ ಜೋಡಿಸುವುದು? ಎಂದು. ನಮ್ಮ ಶಾಂತಿಧಾಮ, ಸುಖಧಾಮದಲ್ಲಿ ಹೋಗೋಣವೇ ಅಥವಾ ಇಲ್ಲಿ ಹೋಗೋಣವೇ? ವಾಸ್ತವದಲ್ಲಿ ಇಲ್ಲಿ ಹೋಗೋಣವೆನ್ನುವ ವಿಚಾರವೇ ಬರಬಾರದಾಗಿದೆ. ಇಲ್ಲಂತೂ ಜನ್ಮ-ಜನ್ಮಾಂತರದಿಂದ ಇರುವಿರಿ. ಈಗ ನಾವು ಪಾರಲೌಕಿಕ ತಂದೆಯನ್ನು ಎಂದೂ ಬಿಡಬಾರದು.

ಇಲ್ಲಿ ನೀವು ಮಕ್ಕಳು ಸಮ್ಮುಖದಲ್ಲಿ ಕುಳಿತಿರುವಿರಿ. ನಿಮ್ಮ ಲೌಕಿಕ ಸಂಬಂಧ ಯಾರೂ ಇಲ್ಲ. ಬುದ್ಧಿಯಂತು ಹೇಳುತ್ತದೆ ನಾವು ಬಾಬಾನ ಜೊತೆ ಮುಕ್ತಿಧಾಮ-ಶಾಂತಿಧಾಮಕ್ಕೆ ಹೋಗೋಣವೆಂದು. ಬೆಳಿಗ್ಗೆ ಅಮೃತವೇಳೆ ಎದ್ದು ಈ ರೀತಿ ವಿಚಾರಸಾಗರ ಮಂಥನ ಮಾಡಬೇಕಾಗಿದೆ. ಅಮೃತವೇಳೆ ಕುಳಿತಾಗ ಬಹಳ ಮಜಾ ಬರುತ್ತದೆ. ಈಗ ಯಾವಕಡೆ ಹೋಗಬೇಕಾಗುವುದು? ನರಕದ ಕಡೆ ಏಕೆ ಹೋಗಬೇಕು?ಈ ಮಾಯೆ ಬಹಳ ಮೋಸ ಮಾಡುತ್ತದೆ. ಈಗಂತೂ ನಿಮ್ಮ ಬಳಿ ಗುರಿ-ಉದ್ದೇಶವಿದೆ. ಈಗ ನೀವು ಅಂಚಿನಲ್ಲಿರುವಿರಿ, ಈ ಕಡೆಯಂತೂ ದುಃಖವೇ ದುಃಖವಿದೆ, ಆ ಕಡೆ 21ಜನ್ಮಗಳ ಸುಖವಿದೆ ಎಂದು ತಿಳಿದಿರುವಿರಿ. ತಂದೆ ಹೇಳುತ್ತಾರೆ ನನ್ನನ್ನು ನೆನಪು ಮಾಡಿ ಏಕೆಂದರೆ ನೀವು ನನ್ನ ಬಳಿ ಬರಬೇಕಾಗಿದೆ. ಮಾಯೆ ಹೇಳುತ್ತದೆ ಪ್ರಪಂಚದ ಕಡೆ ಹೋಗು ಎಂದು. ಎಲ್ಲಿ ಹೋಗುವುದು? ಮಾರ್ಗವಂತು ಸಿಕ್ಕಿದೆ. ಒಂದುಕಡೆ ಸ್ವರ್ಗಕ್ಕೆ ಹೋಗುವ ರಸ್ತೆ, ಎರಡನೆಯದು ನರಕದಕಡೆ ಹೋಗುವ ರಸ್ತೆ, ಮೂರುರಸ್ತೆ ಸೇರುವ ಸ್ಥಾನ ಇರುವುದಲ್ಲವೇ. ಮೂರು ಗಲ್ಲಿಗಳ ಮಧ್ಯೆಯಲ್ಲಿ ವೃತ್ತ ಇರುತ್ತದೆ. ಈಗ ನಾವು ಯಾವಕಡೆ ಹೋಗುವುದು? ಒಂದು ಗಲ್ಲಿಯಾಗಿದೆ ಮುಕ್ತಿ, ಇನ್ನೊಂದು ಗಲ್ಲಿಯಾಗಿದೆ ಜೀವನ್ಮುಕ್ತಿಯಕಡೆ ಮತ್ತು ಮೂರನೆಯದಾಗಿದೆ ನರಕದಕಡೆ. ಹೇಗೆ ಮೂರು ನದಿಗಳ ಸಂಗಮಯಿರುವಹಾಗೆ. ಮೂರು ಮಾರ್ಗಗಳು. ಒಂದು ಮಾರ್ಗದಲ್ಲಿ ನಾವಿದ್ದೇವೆ. ಮೂರುಮಾರ್ಗದ ಉದಾಹರಣೆ ಚೆನ್ನಾಗಿದೆ. ಈಗ ಎಲ್ಲಿ ಹೋಗುವುದು? ನರಕವಂತು ವಿನಾಷವಾಗುವುದಿದೆ. ಇಲ್ಲಿ

ದುಃಖ ಬಹಳ ಇದೆ. ಈಗ ನಾವು ಮೂರು ಮಾರ್ಗ ಮಧ್ಯೆ ನಿಂತಿದ್ದೇವೆ. ಹಿಂದಿರುಗಿ ಹೋಗುವಂತಿಲ್ಲ.

ದುಃಖದ ಗಲ್ಲಿಯಿಂದ ತೆಗೆದು ಮೂರು ಮಾರ್ಗದ ಮಧ್ಯೆ ಬಾಬಾ ನಿಲ್ಲಿಸಿದ್ದಾರೆ. ದುಃಖದ ಗಲ್ಲಿಯಂತೂ ನೀವು ಜನ್ಮಜನ್ಮಾಂತರ ಪಾರು ಮಾಡಿ ಬಂದಿರುವಿರಿ. ಈಗ ಬುದ್ಧಿ ಹೇಳುತ್ತದೆ ಮುಕ್ತಿ-ಜೀವನ್ಮುಕ್ತಿಯ ಕಡೆ ಹೋಗೋಣ ಎಂದು. ಮುಕ್ತಿ ಧಾಮದಲ್ಲಂತೂ ಸದಾಕಾಲಕ್ಕೆ ಕುಳಿತುಕೊಳ್ಳುವಂತಿಲ್ಲ. ನಾವು ಪಾತ್ರ ಮಾಡುವುದರಿಂದ ಬಿಡಿಸಿಕೊಳ್ಳೋಣ, ಬರುವುದೇ ಬೇಡ. ಪಾತ್ರದಿಂದ ಬಿಡಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದಲ್ಲ. ಡ್ರಾಮಾನುಸಾರ ಖಂಡಿತ ಬರಲೇಬೇಕು. ನಂತರ ಸೊಳ್ಳೆಗಳೋಪಾದಿಯಲ್ಲಿ ಸಾಯುವಿರಿ. ಇಷ್ಟು ದುಃಖ ನೋಡಿದಮೇಲೆ ಅಷ್ಟೇ ದುಃಖವನ್ನು ನೋಡಬೇಕಾಗಿದೆ. ಡ್ರಾಮದಲ್ಲಿ ಬಾಬಾ ಹೊರೆಯನ್ನು ಸರಿಯಾಗಿಟ್ಟಿದ್ದಾರೆ, ಕೆಲವರ ಪಾತ್ರ ಬಹಳ ಕಡಿಮೆಯಿದೆ, ಬರುತ್ತಾರೆ ಒಂದು ಎರಡು ಜನ್ಮಪಡೆಯುತ್ತಾರೆ, ಮತ್ತೆ ಹೊರಟುಬಿಡುತ್ತಾರೆ. ಈಗ ನೀವು ಮೂರು ಮಾರ್ಗದ ಮಧ್ಯೆ ನಿಂತಿರುವಿರಿ. ಶಾಂತಿಧಾಮ, ಸುಖದಾಮ. ಒಂದುವೇಳೆ ಶಾಂತಿಧಾಮಕ್ಕೆ ಹೋಗಬೇಕಾದರೆ ಶಾಂತಿಧಾಮವನ್ನು ನೆನಪುಮಾಡುತ್ತಿರಿ. ಮುಕ್ತಿಯನ್ನಂತು ನೆನಪು ಮಾಡಬೇಕಲ್ಲವೇ. ಕೊನೆಯಲ್ಲಿ ಬರುವವರು ಮುಕ್ತಿಧಾಮದಲ್ಲಿ ಹೆಚ್ಚು ಸಮಯ ಇರುವಕಾರಣ ಮುಕ್ತಿಧಾಮವೇ ಹೆಚ್ಚು ನೆನಪಿಗೆ ಬರುತ್ತದೆ. ನಿಮಗೆ ಜೀವನ್ಮುಕ್ತಿಧಾಮ ನೆನಪಿಗೆ ಬರುತ್ತದೆ. ಸ್ವರ್ಗಕ್ಕೆ ಬೇಗ ಹೋಗೋಣವೆಂದು. ಅವರು ಇಚ್ಛಿಸುತ್ತಾರೆ ನಾವು ಮುಕ್ತಿಯಲ್ಲೇ ಇರೋಣ ಎಂದು. ಒಳ್ಳೆಯದು, ತಂದೆಯನ್ನು ನೆನಪು ಮಾಡುತ್ತಿರಿ ಇದರಲ್ಲೂ ಕಲ್ಯಾಣವಿದೆ. ನಿರ್ವಾಣಧಾಮದಲ್ಲಿ ಇರಲು ಇಚ್ಛಿಸುವಿರಿ, ಸುಖಧಾಮದಲ್ಲಿ ಬರಲು ಇಚ್ಛೆಯಿಲ್ಲ ಎಂದರೆ ತಿಳಿಯಲಾಗುತ್ತೆ ಇವರ ಪಾತ್ರವಿಲ್ಲ ಎಂದು ಕಂಡುಬರುತ್ತದೆ. ನೀವಂತೂ ಸುಖಧಾಮದಲ್ಲಿ ಹೋಗುವಂತಹವರು ಮೂರು ಮಾರ್ಗ ಮಧ್ಯೆ ನಿಂತಿರುವಿರಿ. ಪುರುಷಾರ್ಥ ಮಾಡುವಿರಿ.

ಮನುಷ್ಯರಿಗೆ ನಿಮ್ಮ ಸತ್ಯ ಯೋಗ ಇಷ್ಟವಾಗುತ್ತದೆ. ಒಳ್ಳೆಯದು, ತಂದೆಯನ್ನು ನೆನಪು ಮಾಡುತ್ತಿರಿ. ಚಕ್ರವನ್ನೂ ನೆನಪು ಮಾಡುವ ಅಗತ್ಯವಿಲ್ಲ. ಈ ಜ್ಞಾನ ಎಲ್ಲಾ ಧರ್ಮದವರಿಗೂ ಅನ್ವಯಿಸುತ್ತದೆ. ತಿಳಿಯುವರು ಡ್ರಾಮಾನುಸಾರ ಯಾರು ಎಷ್ಟು ಈ ಜ್ಞಾನ ತೆಗೆದುಕೊಂಡಿದ್ದರು ಅವರೇ ಮತ್ತೆ ಬಂದು ತಮ್ಮ ಸ್ಥಾನ ತೆಗೆದುಕೊಳ್ಳುತ್ತಾರೆ. ಮುಕ್ತಿಧಾಮಕ್ಕೆ ಹೋಗುವ ಇಚ್ಛೆ ಇದ್ದರೆ ತಂದೆಯನ್ನು ನೆನಪುಮಾಡಿ. ಒಂದುವೇಳೆ ನವು ಸದಾ ಸುಖಿಯಾಗಿರಬೇಕು ಅಂದರೆ ಅಲ್ಲಿ ಶಾಂತಿಯೂ ಸಹ ಇರುತ್ತದೆ, ಸುಖವೂ ಇದೆ. ಯಾರು ಯಾವ ಕಡೆಯವರಾಗಿರುವರೋ ಅವರು ಅಂತಹ ಆಸ್ತಿಯನ್ನು ಪಡೆಯುವರು. ಸರ್ವರ ಮುಕ್ತಿ-ಜೀವನ್ಮುಕ್ತಿದಾತ ತಂದೆಯೇ ಆಗಿದ್ದಾರಲ್ಲವೇ. ಒಂದು ಎರಡು ಜನ್ಮ ಪಡೆಯುವವರೂ ಅದರಲ್ಲೇ ಸುಖವನ್ನೂ ನೋಡುತ್ತಾರೆ, ದುಃಖವನ್ನೂ ನೋಡುತ್ತಾರೆ. ಹೇಗೆ ಸೊಳ್ಳೆಯು ಬಂದು ಹೋಗುತ್ತದೆ. ಅದಕ್ಕೆ ಯಾವುದೇ ಅಮೂಲ್ಯ ಜೀವನ ಎಂದು ಹೇಳುವುದಿಲ್ಲ. ನೀವಂತೂ ಸದಾ ಹರ್ಷಿತವಾಗಿರುವವರಾಗಿರುವಿರಿ. ನೀವು ಲೈಟ್ಹೌಸ್ ಆಗಿ ನಿಂತಿರುವಿರಿ. ಎರಡೂ ರಸ್ತೆ ತೋರಿಸುವವರಾಗಿರುವಿರಿ. ಮುಕ್ತಿಧಾಮಕ್ಕಾದರೂ ನಡೆಯಿರಿ, ಮುಕ್ತಿ-ಜೀವನ್ಮುಕ್ತಿ ಎರಡನ್ನೂ ನೆನಪುಮಾಡಿ. ಇದರಲ್ಲಿ ಶಾಸ್ತ್ರ ಮುಂತಾದುವುಗಳನ್ನು ಓದುವ ಅವಶ್ಯಕತೆಯೇನೂ ಇಲ್ಲ. ಕುಮಾರಿಯರಿಗಂತೂ ಬಹಳ ಸಹಜವಾಗಿದೆ ಏಕೆಂದರೆ ಏಣಿಯನ್ನು ಏರಿರುವುದಿಲ್ಲ. ಚಿಕ್ಕಂದಿನಲ್ಲೆ ವಿದ್ಯೆ ಓದುವುದು ಒಳ್ಳೆಯದು ಏಕೆಂದರೆ ಒಳ್ಳೆಯಬುದ್ಧಿಯಿರುತ್ತದೆ. ಯಾರದೇ ನೆನಪಿರುವುದಿಲ್ಲ. ನೀವೆಲ್ಲಾ ಕುಮಾರಿಯರಾಗಿರುವಿರಿ, ನೀವು ಬೇರೆ ಏನನ್ನೂ ಮಾಡುವಂತಿಲ್ಲ. ಕೇವಲ ವಿದ್ಯೆಯಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ, ಅಷ್ಟೇ, ನದಿಯನ್ನು ಪಾರು ಮಾಡಿಬಿಡುವಿರಿ. ಈ ಮಾತನ್ನು ಬೇಹದ್ದಿನ ತಂದೆಯೇ ತಿಳಿಸುತ್ತಾರೆ ಯಾರು ನಂತರ ನಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಚಿತ್ರವೂ ಇದೆ ನಾವು ಹೀಗೆ ಆಗಬೇಕಾಗಿದೆ. ತಂದೆ ಹೇಳುತ್ತಾರೆ ಈ ವಿಧ್ಯೆಯಿಂದ ನೀವು ದೇವತೆಗಳಾಗುವಿರಿ. ಈಗ ಈ ಆಟ ಮುಗಿಯುವುದಿದೆ. ಮನುಷ್ಯರಂತೂ ಘೋರ ಅಂಧಕಾರದಲ್ಲಿದ್ದಾರೆ. ನೀವು ಈಗ ಬೆಳಕಿನಲ್ಲಿದ್ದೀರಿ. ತಂದೆ ಬಂದು ನಿದ್ದೆಯಿಂದ ಎಚ್ಚರಗೊಳಿಸಿದ್ದಾರೆ. ಇಲ್ಲಿ ಬುದ್ಧಿಯನ್ನು, ಆತ್ಮವನ್ನು ಎಚ್ಚರಗೊಳಸಲಾಗುತ್ತದೆ. ತಂದೆ ಬಂದು ಎಚ್ಚರಗೊಳಿಸುತ್ತಾರೆ- ಎದ್ದೇಳಿ, ಸುಖಧಾಮಕ್ಕೆ ಹೋಗಲು ಪುರುಷಾರ್ಥ ಮಾಡಿ. ಯಾರು ನಿಮ್ಮ ಕುಲದವರಾಗಿದ್ದಾರೆ ಅವರು ಬರುತ್ತಾ ಹೋಗುತ್ತಾರೆ. ವೃದ್ಧಿಯನ್ನು ಹೊಂದುತ್ತಾ ಹೋಗುತ್ತಾರೆ. ನಿಮ್ಮ ಪ್ರಜೆಗಳು ಎಷ್ಟು ಮಂದಿ ಆಗುತ್ತಾರೆ, ಎಂದು ನೀವು ಲೆಕ್ಕಹಾಕಬಲ್ಲಿರಾ? ಇಲ್ಲ. ಕೆಲವರು ಬಹಳ ಕೇಳುತ್ತಾರೆ, ಕೆಲವರು ಸ್ವಲ್ಪಕೇಳಿ ಹೋಗಿಬಿಡುತ್ತಾರೆ. ಲೆಕ್ಕಾ ಹಾಕಲು ಸಾಧ್ಯವಿಲ್ಲ. ದೊಡ್ಡಮಾಲೆ, ಚಿಕ್ಕಮಾಲೆ, ಸಾಹುಕಾರ, ಪ್ರಜೆಗಳು ಹೇಗೆ ಆಗುತ್ತಾರೆ, ಅದೆಲ್ಲಾ ಬುದ್ಧಿಯಲ್ಲಿದೆ. ಮುಖ್ಯ ಸೂರ್ಯವಂಶಿ ಮಹಾರಾಜಾ-ಮಹಾರಾಣಿ ಯಾರಾಗುತ್ತಾರೆ, ಮತ್ತೆ ಚಂದ್ರವಂಶಿ ಯಾರಾಗುತ್ತಾರೆ, ಎಷ್ಟು ಪ್ರಜೆಗಳಾಗಬೇಕು ಎಂಬ ಎಲ್ಲಾ ಮಾತುಗಳನ್ನು ನಿಮಗೆ ಇಲ್ಲಿ ತಿಳಿಸಲಾಗುತ್ತೆ. ಇಡೀ ವೃಕ್ಷ ಅಥವಾ ಎಲ್ಲಾ ಧರ್ಮದ ಚಕ್ರಗಳ ಮಧ್ಯೆ ಹೇಗೆ ರೆಂಬೆ ಕೊಂಬೆಗಳು, ಎಲೆ ಮುಂತಾದವುಗಳು ಬರುತ್ತಿರುತ್ತವೆ, ಈಗಲೂ ಎಲೆಗಳು ಬರುತ್ತಿರುತ್ತವೆ. ಅಲ್ಲಿ ನಿರಾಕಾರಿ ಪ್ರಪಂಚದಲ್ಲಿ ಪೂರ್ತಿ ಖಾಲಿಯಾಗಿಬಿಡುತ್ತದೆ. ನಂತರ ವಿನಾಶವಾಗಬೇಕು. ದೊಡ್ಡ ಯುದ್ಧಗಳಲ್ಲಿ ಕೋಟಿ ಜನರು ಪ್ರಾಣತೆತ್ತಿರಬಹುದು, ಲೆಕ್ಕವಿಲ್ಲದಷ್ಟು. ಈಗಂತು ಎಷ್ಟು ಜನ ಸಮಾಪ್ತಿಯಾಗುತ್ತಾರೆ. ಬಾಕಿ ಸ್ವಲ್ಪಜನ ಸತ್ಯಯುಗದಲ್ಲಿ ಬಂದು ರಾಜ್ಯ ಮಾಡುತ್ತಾರೆ. ಈಗಂತೂ ಎಷ್ಟು ಮನುಷ್ಯರಿದ್ದಾರೆ. ಅನ್ನವೇ ಅಷ್ಟಿಲ್ಲ.

ನೀವು ಮಕ್ಕಳು ತಿಳಿದಿದ್ದೀರಿ- ತಂದೆ ಬರುವುದೇ ಸಂಗಮದಲ್ಲಿ. ತಂದೆ ತಿಳಿಸುತ್ತಾರೆ- ಮಕ್ಕಳೇ, ಶರೀರ ನಿರ್ವಾಹಣೆಗಾಗಿ ಕೆಲಸವನ್ನು ಮಾಡಲೇಬೇಕು. ಪ್ರತಿ ಮಾತಿನಲ್ಲಿ ತಂದೆಯ ಸಲಹೆ ಪಡೆಯುತ್ತಾ ಹೋಗಿ. ಪ್ರತಿಯೊಬ್ಬರ ಲೆಕ್ಕಾಚಾರ ತನ್ನ-ತನ್ನದೇ

ಆಗಿರುತ್ತದೆ. ಶ್ರೀಮತವನ್ನು ಅವಿನಾಶಿ ಸರ್ಜನ್ರಿಂದ ತೆಗೆದುಕೊಳ್ಳುತ್ತಾ ಹೋಗಿ. ಎಲ್ಲರಿಗೂ ತಮ್ಮ-ತಮ್ಮದೇ ಆದ ಔಷಧಿಯನ್ನು ತಿಳಿಸುತ್ತಾರೆ. ತಿಳಿಸಲಾಗುತ್ತೆ- ಈ ಪ್ರಪಂಚವು ಸಮಾಪ್ತಿಯಾಗಿಬಿಟ್ಟಿದೆ. ಈಗ ತಂದೆಯನ್ನು ನೆನಪು ಮಾಡುವುದರಿಂದ ನಿಮ್ಮ ದೋಣಿ ಪಾರಾಗಿಬಿಡುತ್ತದೆ. ತಂದೆ ಬರುವುದೇ ನರಕವನ್ನು ವಿನಾಶ ಮಾಡಿ ಸ್ವರ್ಗದ ಸ್ಥಾಪನೆ ಮಾಡಲು. ನಾವು ನಿಮಗೂ ಸಲಹೆ ಕೊಡುತ್ತೇವೆ, ಶ್ರೀ ಶ್ರೀ ಯವರಿಂದ ಸಿಕ್ಕಿರುವ ಶ್ರೀಮತವನ್ನು ನಾವು ನಿಮಗೂ ಕೊಡುತ್ತೇವೆ. ತಂದೆ ಹೇಳುತ್ತಾರೆ ನನ್ನನ್ನು ನೆನಪು ಮಾಡಿದಾಗ ನೀವು ಸ್ವರ್ಗದ ಮಾಲೀಕರಾಗುವಿರಿ. ಒಳ್ಳೆಯದು!

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1) ಸೇವೆಯಲ್ಲಿ ರುಚಿ ಇಡಬೇಕಾಗಿದೆ. ಖಾಯಿಲೆಯಲ್ಲೂ ಸಹ ತಂದೆಯ ನೆನಪಿನಲ್ಲಿರಬೇಕು ಮತ್ತು ಅನ್ಯರಿಗೂ ನೆನಪನ್ನು ತರಿಸಬೇಕು. ಮುಖದಿಂದ ಜ್ಞಾನ ದಾನವನ್ನು ಮಾಡುತ್ತಿರಬೇಕು.

2) ಪಕ್ಕಾ ಸ್ವಂತ ಮಕ್ಕಳಾಗಬೇಕು ಅರ್ಥಾತ್ ಒಬ್ಬ ತಂದೆಯ ನೆನಪಿನಲ್ಲೆ ಇರಬೇಕು. ಬೆಳಗ್ಗೆ-ಬೆಳಗ್ಗೆ ಅಮೃತವೇಳೆ ಎದ್ದು ವಿಚಾರ ಸಾಗರ ಮಂಥನ ಮಾಡಬೇಕಾಗಿದೆ. ಬೇರೆ ಯಾರೂ ನೆನಪಿಗೆ ಬರಬಾರದಾಗಿದೆ.

ವರದಾನ: ತಮ್ಮ ಶುಭ ಮತ್ತು ಶಕ್ತಿಶಾಲಿ ಭಾವನೆಗಳ ಮೂಲಕ ವಿಶ್ವ ಪರಿವರ್ತನೆ ಮಾಡುವಂತಹ ವಿಶ್ವ ಕಲ್ಯಾಣಕಾರಿ ಭವ. ತಾವು ಮಕ್ಕಳ ಮನಸ್ಸಿನಲ್ಲಿ ಸದಾ ಇದೇ ಶುಭ ಭಾವನೆಯಿದೆ ಸರ್ವರ ಕಲ್ಯಾಣವಾಗಲಿ ಎಂದು. ಎಲ್ಲಾ ಆತ್ಮರೂ ಅನೇಕ ಜನ್ಮ ಸುಖಿಯಾಗಿ ಬಿಡಲಿ, ಪ್ರಾಪ್ತಿಗಳಿಂದ ಸಂಪನ್ನವಾಗಿ ಬಿಡಲಿ. ನಿಮ್ಮ ಈ ಶುಭ ಮತ್ತು ಶಕ್ತಿಶಾಲಿ ಭಾವನೆಯ ಫಲ ವಿಶ್ವದ ಆತ್ಮಗಳನ್ನು ಪರಿವರ್ತನೆ ಮಾಡುತ್ತಿದೆ, ಮುಂದೆ ಹೋದಂತೆ ಪ್ರಕೃತಿ ಸಹಿತ ಪರಿವರ್ತನೆಯಾಗಿ ಬಿಡುವುದು. ಏಕೆಂದರೆ ನೀವು ಸಂಗಮಯುಗಿ ಶ್ರೇಷ್ಠ ಆತ್ಮರಿಗೆ ಡ್ರಾಮಾನುಸಾರ ಪ್ರತ್ಯಕ್ಷ ಫಲ ಪ್ರಾಪ್ತಿಯಾಗುವ ವರದಾನವಿದೆ. ಆದ್ದರಿಂದ ಯಾವುದೇ ಆತ್ಮರು ನಿಮ್ಮ ಸಂಬಂಧ ಸಂಪರ್ಕದಲ್ಲಿ ಬರುವರು ಅವರು ಅದೇ ಸಮಯದಲ್ಲಿ ಶಾಂತಿ ಹಾಗೂ ಸ್ನೇಹದ ಫಲದ ಅನುಭೂತಿ ಮಾಡುವರು.

ಸ್ಲೋಗನ್: ತ್ರಿಕಾಲದರ್ಶಿ ಸ್ಥಿತಿಯಲ್ಲಿ ಸ್ಥಿತರಾಗಿ ನಿರ್ಣಯ ಮಾಡಿ ಆಗ ಎಲ್ಲಾ ಕರ್ಮದಲ್ಲಿ ಸಫಲತೆ ಪ್ರಾಪ್ತಿಯಾಗುವುದು.